# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ,
ದಾವಣಗೆರೆ-577 007.

## 2026-27ನೇ ಸಾಲಿನ ವಿದ್ಯಾವಿಷಯಕ ಪರಿಷತ್
## 1ನೇ ಸಾಮಾನ್ಯ ಸಭೆಯ ನಡಾವಳಿಗಳು
## ದಿನಾಂಕ:28.08.2026

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008


ಃ ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂದತೆ ಅಮೃತಂ ಃ

ಸಂಖ್ಯೆ: ದಾವಿವಿ/ಪ್ರಾಧಿಕಾರ/ವಿವಿಪ/224/2026–27/2690 ದಿನಾಂಕ:07.09.2026

ಗೆ,

ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ.

ಮಾನ್ಯರೆ,

**ವಿಷಯ ಃ ದಿನಾಂಕ:28.08.2026 ರಂದು ಜರುಗಿದ 1ನೇ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳು.**

*****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ–IIರ ಪ್ರಕರಣ 16(i)ರ ರೀತ್ಯ ದಿನಾಂಕ:28.08.2026 ರಂದು ಬೆಳಿಗ್ಗೆ 11:30 ಕ್ಕೆ ವಿಶ್ವವಿದ್ಯಾನಿಲಯದ ಎಂ.ಬಿ.ಎ. ಕಟ್ಟಡದ ಸಭಾಂಗಣದಲ್ಲಿ ಜರುಗಿದ 1ನೇ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–II ರ ಪ್ರಕರಣ 16(i)ರ ರೀತ್ಯ ನಡಾವಳಿ ತಲುಪಿದ ಏಳು ದಿನಗಳೊಳಗಾಗಿ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ, ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಗೆ,

ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ,

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಹಣಕಾಸು/ಪರೀಕ್ಷಾಂಗ/ಶೈಕ್ಷಣಿಕ/ಮಾಸನಿ/ಅಭಿವೃದ್ಧಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ/ಆರ್.&.ಡಿ, ಘಟಕ ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007.

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:28.08.2026ರಂದು ಜರುಗಿದ ಒಂದನೇ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಇ ರಂಗಸ್ವಾಮಿ, ಮಾನ್ಯ ಕುಲಪತಿಗಳು. : ಅಧ್ಯಕ್ಷರು
2. ಶ್ರೀ ಕೆ. ಅಬ್ದುಲ್ ಜಬ್ಬಾರ್, ಮಾನ್ಯ ವಿಧಾನ ಪರಿಷತ್ತು ಸದಸ್ಯರು : ಸದಸ್ಯರು
3. ಡಾ. ಶಿವಾಜಿ ರಾಮಚಂದ್ರ ಕಟ್ಟಿ, ಪ್ರಾಂಶುಪಾಲರು : ಸದಸ್ಯರು
4. ಶ್ರೀ ಮುರುಗೇಶ ಟಿ, ಪ್ರಾಂಶುಪಾಲರು : ಸದಸ್ಯರು
5. ಡಾ. ಮಂಜುಳ ಡಿ, ಪ್ರಾಂಶುಪಾಲರು : ಸದಸ್ಯರು
6. ಶ್ರೀಮತಿ ಕವಿತ ಜಿ ಎಂ, ಪ್ರಾಂಶುಪಾಲರು : ಸದಸ್ಯರು
7. ಡಾ. ಸುರೇಶ್ ಎಸ್, ಪ್ರಾಂಶುಪಾಲರು : ಸದಸ್ಯರು
8. ಡಾ. ಧನಂಜಯ ಬಿ.ಜಿ, ಪ್ರಾಂಶುಪಾಲರು : ಸದಸ್ಯರು
9. ಶ್ರೀ ಸಿದ್ದೇಶ್ ಎ, ಪ್ರಾಂಶುಪಾಲರು : ಸದಸ್ಯರು
10. ಡಾ. ಎಂ.ಕೆ ದೇವಪ್ಪ, ಪ್ರಾಂಶುಪಾಲರು : ಸದಸ್ಯರು
11. ಡಾ. ಗೋಪಿನಾಥ ಎಸ್.ಎಂ, ಪ್ರಾಧ್ಯಾಪಕರು : ಸದಸ್ಯರು
12. ಡಾ. ಪ್ರಸನ್ನ ಕುಮಾರ ಬಿ.ಸಿ, ಪ್ರಾಧ್ಯಾಪಕರು : ಸದಸ್ಯರು
13. ಡಾ. ಹುಚ್ಚೇಗೌಡ, ಪ್ರಾಧ್ಯಾಪಕರು : ಸದಸ್ಯರು
14. ಡಾ. ನಾಗಸ್ವರೂಪ ಹೆಚ್.ಪಿ, ಪ್ರಾಧ್ಯಾಪಕರು : ಸದಸ್ಯರು
15. ಡಾ. ಲೋಕೇಶ ಎಂ.ಯು, ಡೀನರು, ಕಲಾ ನಿಕಾಯ : ಸದಸ್ಯರು
16. ಡಾ. ಗೋವಿಂದಪ್ಪ ಎಂ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ : ಸದಸ್ಯರು
17. ಡಾ. ಶ್ರೀನಿವಾಸ ಕೆ.ಟಿ, ಡೀನರು, ವಾಣಿಜ್ಯ ನಿಕಾಯ : ಸದಸ್ಯರು
18. ಡಾ. ವೆಂಕಟೇಶ್ ಕೆ, ಡೀನರು, ಶಿಕ್ಷಣ ನಿಕಾಯ : ಸದಸ್ಯರು
19. ಡಾ. ಪ್ರಕಾಶ ಡಿ.ಜಿ., ನಿರ್ದೇಶಕರು, ಪಿ.ಎಂ.ಇ ಮಂಡಳಿ : ಸದಸ್ಯರು
20. ಡಾ. ರಂಗಪ್ಪ ಕೆ.ಬಿ., ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು. : ಸದಸ್ಯರು
21. ಡಾ. ಮಹಾಬಲೇಶ್ವರ ಯು.ಎಸ್., ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ಘಟಕ : ಸದಸ್ಯರು
22. ಡಾ. ಶಶಿಧರ್ ಆರ್, ಹಣಕಾಸು ಅಧಿಕಾರಿಗಳು (ಪ್ರಭಾರೆ) : ಸದಸ್ಯರು
23. ಡಾ. ಸಿ.ಕೆ. ರಮೇಶ್, ಕುಲಸಚಿವರು (ಪರೀಕ್ಷಾಂಗ) : ಸದಸ್ಯರು
24. ಶ್ರೀ ಎಸ್.ಬಿ. ಗಂಟಿ, ಕೆ.ಎ.ಎಸ್, ಕುಲಸಚಿವರು, (ಆಡಳಿತ) : ಸದಸ್ಯ ಕಾರ್ಯದರ್ಶಿ

ಪ್ರಾರಂಭದಲ್ಲಿ ಕುಲಸಚಿವರು ನೂತನ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಮಾನ್ಯ ಕುಲಪತಿಗಳು ಶ್ರೀ ಕೆ. ಅಬ್ದುಲ್ ಜಬ್ಬಾರ್, ಮಾನ್ಯ ವಿಧಾನ ಪರಿಷತ್ತು ಸದಸ್ಯರು, ಇವರನ್ನು ಸಭೆಗೆ ಸ್ವಾಗತಿಸಿ ನಂತರ ವಿದ್ಯಾವಿಷಯಕ ಪರಿಷತ್ತು ಸಭೆಗೆ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಂದ ಜೇಷ್ಠತೆಯನುಸಾರ ಹೊಸದಾಗಿ ನೇಮಕಗೊಂಡಿರುವ ಒಟ್ಟು 8 ಕಾಲೇಜುಗಳ ಪ್ರಾಂಶುಪಾಲರುಗಳನ್ನು ಅಭಿನಂದಿಸಿ ಸಭೆಗೆ ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ತದನಂತರ, ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 1 | |
| --- | --- |
| ವಿಷಯ ಸಂಖ್ಯೆ: | ವಿ.ವಿ.ಪ.01(a)–(08/26) |

## –: ಟಿಪ್ಪಣಿ :–

**ವಿಷಯಃ ದಿನಾಂಕ:06.05.2026 ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ ಕುರಿತು.**

*****

ದಿನಾಂಕ:06.05.2026 ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ವಿದ್ಯಾವಿಷಯಕ ಪರಿಷತ್ ಸದಸ್ಯರುಗಳಿಗೆ ದಿನಾಂಕ:22.05.2026ರಂದು ಕಳುಹಿಸಲಾಗಿತ್ತು. ಈ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದುವರೆಗೂ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಗೊಂಡಿರುವುದಿಲ್ಲ. ಆದ್ದರಿಂದ, ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:28.08.2026 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ06.05.2026ರಂದು ಏರ್ಪಡಿಸಲಾಗಿದ್ದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭಾ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ನಡಾವಳಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 2 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(c)–(08/26) |

## –: ಟಿಪ್ಪಣಿ :–

**ವಿಷಯ:** **ವಿಶ್ವವಿದ್ಯಾನಿಲಯದ ಶಿಕ್ಷಣ ನಿಕಾಯಕ್ಕೆ ಪ್ರೊ. ವೆಂಕಟೇಶ್ ಕೆ., ಪ್ರಾಧ್ಯಾಪಕರು – ಇವರನ್ನು ಶಿಕ್ಷಣ ನಿಕಾಯದ ಡೀನರನ್ನಾಗಿ ನಾಮನಿರ್ದೇಶನ ಮಾಡಿ ಮುಂದುವರೆಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

*****

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಸೆಕ್ಷನ್ 21 (1) ರನ್ವಯ, ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗಗಳಲ್ಲಿನ ಪ್ರಾಧ್ಯಾಪಕರುಗಳ ಜೇಷ್ಠತೆಯನುಸಾರ ಡಾ. ವೆಂಕಟೇಶ್ ಕೆ., ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರನ್ನು ಶಿಕ್ಷಣ ನಿಕಾಯದ ಡೀನರನ್ನಾಗಿ ದಿನಾಂಕ:08.07.2024 ರಿಂದ ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಲಾಗಿತ್ತು. ಅದರಂತೆ ಸದರಿಯವರ ಡೀನರ ಅವದಿಯು ದಿನಾಂಕ:07.07.2026 ರಂದು ಮುಕ್ತಾಯಗೊಂಡಿರುವುದರಿಂದ ಸದರಿಯವರನ್ನು ಶಿಕ್ಷಣ ನಿಕಾಯದ ಡೀನರ ನಾಮನಿರ್ದೇಶನದಿಂದ ಪದಮುಕ್ತಗೊಳಿಸಲಾಗಿದೆ.

ಮುಂದುವರೆದು, ವಿಶ್ವವಿದ್ಯಾನಿಲಯದ ಶಿಕ್ಷಣ ನಿಕಾಯದಲ್ಲಿ ಪ್ರಾಧ್ಯಾಪಕರುಗಳ ಜೇಷ್ಠತೆನುಸಾರ (ಡಾ. ವೆಂಕಟೇಶ್, ಪ್ರಾಧ್ಯಾಪಕರು ಇವರನ್ನು ಹೊರತುಪಡಿಸಿ) ಪ್ರಾಧ್ಯಾಪಕರು/ ಸಹ ಪ್ರಾಧ್ಯಾಪಕರು ಇಲ್ಲದೇ ಇರುವುದರಿಂದ ಹಿರಿಯ ಹಾಗೂ ಅನುಭವಿಗಳಾದ ಡಾ. ವೆಂಕಟೇಶ್ ಕೆ., ಪ್ರಾಧ್ಯಾಪಕರು, ಸ್ನಾತಕೋತ್ತಗ ಶಿಕ್ಷಣ ಅಧ್ಯಯನ ವಿಭಾಗ – ಇವರನ್ನು ದಿನಾಂಕ:08.07.2026 ರಿಂದ 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಶ್ವವಿದ್ಯಾನಿಲಯದ ಶಿಕ್ಷಣ ನಿಕಾಯದ ಡೀನರನ್ನಾಗಿ ಮರು ನಾಮನಿರ್ದೇಶಿಸಿರುವುದಕ್ಕೆ ದಿನಾಂಕ:28.08.2026 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗಗಳಲ್ಲಿನ ಪ್ರಾಧ್ಯಾಪಕರುಗಳ ಜೇಷ್ಠತೆಯನುಸಾರ ಡಾ. ವೆಂಕಟೇಶ್ ಕೆ., ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರನ್ನು ದಿನಾಂಕ:08.07.2026 ರಿಂದ 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಶ್ವವಿದ್ಯಾನಿಲಯದ ಶಿಕ್ಷಣ ನಿಕಾಯದ ಡೀನರನ್ನಾಗಿ ಮರು ನಾಮನಿರ್ದೇಶಿಸಿ ಮುಂದುವರೆಸುವುದಕ್ಕೆ ಸಭೆಯು ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 3 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(c)–(08/26) |

**–ಃ ಟಿಪ್ಪಣಿ ಃ–**

ವಿಷಯ: **ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸಭೆಗೆ ಪ್ರೊ. ಲೋಕೇಶ್ ಎಂ.ಯು., ಪ್ರಾಧ್ಯಾಪಕರು ಹಾಗೂ ಡೀನರು, ಕಲಾ ನಿಕಾಯ – ಇವರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

*****

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ರ ಪ್ರಕರಣ 32 (1) (vi) ರನ್ವಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ವತಿಯಿಂದ – **ಪ್ರೊ. ಲೋಕೇಶ್ ಎಂ.ಯು., ಡೀನರು, ಕಲಾ ನಿಕಾಯ, ಹಾಗೂ ವಿದ್ಯಾವಿಷಯಕ ಪರಿಷತ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ** – ಇವರನ್ನು ದಿನಾಂಕ:05.08.2026 ರಿಂದ ಅನ್ವಯವಾಗುವಂತೆ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಇರುವವರೆಗೆ ಅಥವಾ ಮುಂದಿನ ಆದೇಶದವರೆಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶಿಸಿರುವುದಕ್ಕೆ ದಿನಾಂಕ:28.08.2026 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ವತಿಯಿಂದ – **ಪ್ರೊ. ಲೋಕೇಶ್ ಎಂ.ಯು., ಡೀನರು, ಕಲಾ ನಿಕಾಯ, ಹಾಗೂ ವಿದ್ಯಾವಿಷಯಕ ಪರಿಷತ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ** – ಇವರನ್ನು ದಿನಾಂಕ:05.08.2026 ರಿಂದ ಅನ್ವಯವಾಗುವಂತೆ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಇರುವವರೆಗೆ ಅಥವಾ ಮುಂದಿನ ಆದೇಶದವರೆಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಅಧ್ಯಯನ ಮಂಡಳಿ ವಿಭಾಗ – 4 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(a)–(08/25) |

## –ಃ ಟಿಪ್ಪಣಿ ಃ–

**ವಿಷಯಃ 2026–27ನೇ ಶೈಕ್ಷಣಿಕ ಸಾಲಿನಲ್ಲಿ Short-Term Skill Development Course ಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಅನುಮೋದಿಸುವ ಕುರಿತು.**

*****

ವಿಶ್ವವಿದ್ಯಾನಿಲಯ ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸಂಯೋಜಿತ ಕಾಲೇಜುಗಳಿಗೆ ಮಾನ್ಯ ಕುಲಪತಿಗಳ ನಿರ್ದೇಶಾನುಸಾರ 2026–27ನೇ ಶೈಕ್ಷಣಿಕ ಸಾಲಿನಿಂದ ವಿವಿಧ ಸ್ನಾತಕ/ ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ, Short-Term Skill Development Course ಗಳನ್ನು ಪರಿಚಯಿಸುವ ಸಂಬಂಧ ಎಲ್ಲಾ ನಿಕಾಯದ ಡೀನರುಗಳು "Draft Guidelines for Short-Term Skill Development Courses at Davangere University" ಮಾರ್ಗಸೂಚಿಗಳನ್ನು ಸಿದ್ಧಪಡಿಸಿದ್ದು, ಸದರಿ ಮಾರ್ಗಸೂಚಿಗಳನ್ನು ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಅಧ್ಯಯನ ಮಂಡಳಿ ಅಧ್ಯಕ್ಷರುಗಳಿಗೆ ಪರಿಚಯಿಸಿ ಪಠ್ಯಕ್ರಮ ಸಿದ್ದಪಡಿಸಲು ಸೂಚಿಸಿರುವುದಕ್ಕೆ ದಿನಾಂಕ:28.08.2026ರ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

**ವಿವರಣೆ:**

**ಪ್ರೊ. ಕೆ.ಟಿ ಶ್ರೀನಿವಾಸ–** ಪ್ರಾಧ್ಯಾಪಕರು, ಡೀನರು, ವಾಣಿಜ್ಯ ನಿಕಾಯ ಮತ್ತು ಮಾನ್ಯ ವಿದ್ಯಾವಿಷಯಕ ಪರಿಷತ್ತು ಸದಸ್ಯರು ಇವರು Short-Term Skill Development Courseಗಳನ್ನು ಪರಿಚಯಿಸಿದ್ದಲ್ಲಿ ವಿದ್ಯಾರ್ಥಿಗಳಿಗೆ ಆಗುವ ಅನುಕೂಲಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಭೆಗೆ ವಿವರಿಸಿದರು.

## :: ನಿರ್ಣಯ ::

ವಿಶ್ವವಿದ್ಯಾನಿಲಯ ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸಂಯೋಜಿತ ಕಾಲೇಜುಗಳಿಗೆ 2026–27ನೇ ಶೈಕ್ಷಣಿಕ ಸಾಲಿನಿಂದ ವಿವಿಧ ಸ್ನಾತಕ/ ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ, "Draft Guidelines for Short-Term Skill Development Courses at Davangere University" ಮಾರ್ಗಸೂಚಿಯನ್ನು ಪರಿಚಯಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು		ಕುಲಪತಿಗಳು

| ಅಧ್ಯಯನ ಮಂಡಳಿ ವಿಭಾಗ – 5 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(b)–(08/25) |

## –: ಟಿಪ್ಪಣಿ :–

ವಿಷಯ: ಬಿ.ಕಾಂ. ಪದವಿಯ **AEDP ಪಠ್ಯಕ್ರಮವನ್ನು ಅನುಮೋದಿಸುವ ಕುರಿತು.**

ಉಲ್ಲೇಖ: ಸರ್ಕಾರದ ನಡಾವಳಿ ಸಂಖ್ಯೆ: ಇಡಿ 93 ಡಿ.ಸಿ.ಇ. 2026(ಇ) ಬೆಂಗಳೂರು ದಿನಾಂಕ: 13.05.2026

*****

ಸರ್ಕಾರದ ನಡಾವಳಿಯನುಸಾರ ಹಾಗೂ ರಾಜ್ಯ ಶಿಕ್ಷಣ ನೀತಿ (SEP)ಯ ಮಾರ್ಗಸೂಚಿಗಳನ್ವಯ ಹಾಗೂ ಉಲ್ಲೇಖಿ ಪತ್ರದನುಸಾರ 2026–27ನೇ ಶೈಕ್ಷಣಿಕ ಸಾಲಿನಿಂದ ಬಿ.ಕಾಂ. ಪದವಿಯ AEDP (Apprenticeship-Embedded Degree Programme) ಕೌಶಲ್ಯಾಧಾರಿತ ಪದವಿ ಕೋರ್ಸನ ಪಠ್ಯಕ್ರಮವನ್ನು ವಾಣಿಜ್ಯ ಅಧ್ಯಯನ ಮಂಡಳಿ ಅಧ್ಯಕ್ಷರು ಸಭೆಯನ್ನು ಏರ್ಪಡಿಸಿ 1 ಮತ್ತು 2ನೇ ಸೆಮಿಸ್ಟರ್ ಪಠ್ಯಕ್ರಮವನ್ನು ಸಿದ್ಧಪಡಿಸಿ ಅಧ್ಯಯನ ಮಂಡಳಿಯ ಅನುಮೋದನೆಯೊಂದಿಗೆ ಸಲ್ಲಿಸಿರುತ್ತಾರೆ.

ಸದರಿ ಪಠ್ಯಕ್ರಮವನ್ನು ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಿರುವುದಕ್ಕೆ ದಿನಾಂಕ:28.08.2026ರ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

2026–27ನೇ ಶೈಕ್ಷಣಿಕ ಸಾಲಿನಿಂದ ಬಿ.ಕಾಂ. ಪದವಿಯ AEDP (Apprenticeship-Embedded Degree Programme) ಕೌಶಲ್ಯಾಧಾರಿತ ಪದವಿಯ ಒಂದು ಮತ್ತು ಎರಡನೇ ಸೆಮಿಸ್ಟರ್ B.Com (Human Resource Operations AEDP) ಪಠ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಅಧ್ಯಯನ ಮಂಡಳಿ ವಿಭಾಗ – 6 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(b)–(08/25) |

## –: ಟಿಪ್ಪಣಿ :–

**ವಿಷಯ:** **ದಾವಣಗೆರೆ ವಿದ್ಯಾನಿಲಯದಲ್ಲಿ Academic and Research advisory Committee ರಚಿಸುವ ಬಗ್ಗೆ.**

**ಉಲ್ಲೇಖ:** ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:12.08.2026

*****

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ Academic and Research advisory Committee ಯನ್ನು ರಚಿಸಿಕೊಳ್ಳಲು ವಿವಿಧ ವಿಶ್ವವಿದ್ಯಾನಿಲಯ/ ರಾಷ್ಟ್ರೀಯ ಸಂಸ್ಥೆ/ ಕೈಗಾರಿಕೆ ಹಾಗೂ ಇತರೆ ಸಂಸ್ಥೆಗಳಿಂದ ತಜ್ಞರನ್ನು ನೇಮಿಸಿಕೊಂಡು ಸಮಿತಿಯನ್ನು ರಚಿಸಲು ದಿನಾಂಕ:28.08.2026 ರಂದು ಏರ್ಪಡಿಸಲಾದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ವಿವರಣೆ:**

**ಮಾನ್ಯ ಕುಲಪತಿಗಳು** ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿ ಅನುಭವವಿರುವ ಶಿಕ್ಷಣ ತಜ್ಞರು/ ವಿವಿಧ ವಿಶ್ವವಿದ್ಯಾನಿಲಯ/ ರಾಷ್ಟ್ರೀಯ ಸಂಸ್ಥೆ/ ಕೈಗಾರಿಕೆ ಹಾಗೂ ಇತರೆ ಸಂಸ್ಥೆಗಳಿಂದ ತಜ್ಞರನ್ನು ನೇಮಿಸಿಕೊಂಡು ಸಮಿತಿಯನ್ನು ರಚಿಸುವುದರಿಂದ ಸಮಿತಿಯು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ/ ಸಂಶೋಧನಾರ್ಥಿಗಳಿಗೆ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಸಂಬಂಧಿಸಿದ ಮಾರ್ಗದರ್ಶನ ಹಾಗೂ ಅನೇಕ ವಿಷಯಗಳ ಬಗ್ಗೆ ಹೆಚ್ಚಿನ ಜ್ಞಾನ ಮತ್ತು ಮಾಹಿತಿಗಳು ಲಭ್ಯವಾಗುತ್ತದೆ ಎಂದು ಸಭೆಗೆ ತಿಳಿಸಿದರು.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ Academic and Research advisory Committee ಯನ್ನು ರಚಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                ಕುಲಪತಿಗಳು

| ಶೈಕ್ಷಣಿಕ ವಿಭಾಗ – 7 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.03(a)–(08/25) |

## –: ಟಿಪ್ಪಣಿ :–

**ವಿಷಯ:** **2026–27ನೇ ಸಾಲಿನ ಸ್ನಾತಕೋತ್ತರ ಪ್ರವೇಶಾತಿ ಮತ್ತು ಶುಲ್ಕದ ಕುರಿತು**

ಉಲ್ಲೇಖ: ಡೀನರು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಧ್ಯಕ್ಷರು/ಸಂಯೋಜನಾಧಿಕಾರಿಗಳ ಸಭಾ ನಡಾವಳಿ ದಿನಾಂಕ:25.06.2026

*****

ವಿಶ್ವವಿದ್ಯಾನಿಲಯ ವ್ಯಾಪ್ತಿಗೊಳಪಡುವ ಸ್ನಾತಕೋತ್ತರ ವಿವಿಧ ಅಧ್ಯಯನ ವಿಭಾಗಗಳು ದಾವಣಗೆರೆ, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ, ಸ್ನಾತಕೋತ್ತರ ಸಂಯೋಜಿತ ಕಾಲೇಜುಗಳಲ್ಲಿನ – 2026–27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕವನ್ನು ಹೆಚ್ಚಿಸದೆ 2025–26ನೇ ಸಾಲಿನ ಶುಲ್ಕವನ್ನೇ ಯಥಾವತ್ತಾಗಿ ಮುಂದುವರೆಸಲಾಗಿರುತ್ತದೆ. (ಎಂ.ಎಸ್.ಡಬ್ಲ್ಯೂ ವಿಭಾಗದ ಶುಲ್ಕವನ್ನು ರೂ.30,000/– ಗಳಿಂದ ರೂ.25,000/– ಗಳಿಗೆ ಕಡಿಮೆ ಮಾಡಲಾಗಿರುತ್ತದೆ) ಪ್ರವೇಶಾತಿ ಶುಲ್ಕ ಹಾಗೂ ಇತರೆ ವಿಷಯಗಳ ಕುರಿತಂತೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:15.06.2026 ರಂದು ನಡೆದ ಎಲ್ಲಾ ನಿಕಾಯದ ಡೀನರು ಹಾಗೂ ವಿಭಾಗದ ಅಧ್ಯಕ್ಷರು/ಸಂಯೋಜನಾಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ಸಭಾ ನಡವಾಳಿಯನ್ನು ದಿನಾಂಕ:28.08.2026 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿವರಣೆ:**

- **ಪ್ರೊ. ಲೋಕೇಶ ಎಂ.ಯು** – ಡೀನರು, ಕಲಾ ನಿಕಾಯ ಮತ್ತು ಮಾನ್ಯ ವಿದ್ಯಾವಿಷಯಕ ಪರಿಷತ್ತು ಸದಸ್ಯರು ಇವರು ಸಮಾಜಕಾರ್ಯ ವಿಭಾಗಕ್ಕೆ ಕಳೆದ ಸಾಲಿನ ಪ್ರವೇಶಾತಿಗೆ ಹೋಲಿಸಿದರೆ ಪ್ರಸ್ತುತ ವರ್ಷದಲ್ಲಿ ಅರ್ಜಿಗಳು ಕಡಿಮೆ ಬಂದಿರುತ್ತವೆ ಹಾಗೂ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಶುಲ್ಕವು ನಮ್ಮ ವಿಶ್ವವಿದ್ಯಾನಿಲಯಕ್ಕಿಂತ ಕಡಿಮೆ ಇರುತ್ತದೆ. ಆದ್ದರಿಂದ ಎಂ.ಎಸ್.ಡಬ್ಲ್ಯೂ ಕೋರ್ಸ್‌ಗೆ ಪ್ರವೇಶಾತಿ ಶುಲ್ಕವನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಡಿಮೆ ಮಾಡುಬಹುದೆಂದು ಹಾಗೂ ಇದರಿಂದ ವಿಶ್ವವಿದ್ಯಾನಿಲಯಕ್ಕೆ ಯಾವುದೇ ರೀತಿಯ ಹೊರೆಯಾಗದಂತೆ ಕ್ರಮವಹಿಸಲಾಗುವುದೆಂದು ಸಭೆಗೆ ವಿವರಣೆ ನೀಡಿದರು.
- **ಮಾನ್ಯ ಕುಲಪತಿಗಳು** ಮಕ್ಕಳಿಗೆ ಅಗತ್ಯವಿರುವ ಹಾಗೂ ಮಾನ್ಯತೆ ಸಿಗುವಂತಹ ಪಠ್ಯಕ್ರಮವನ್ನು ಸಿದ್ಧಪಡಿಸಬೇಕು ಹಾಗೂ ಕಂಪನಿಗಳಲ್ಲಿ ಕೆಲಸ ನಿರ್ವಹಿಲು ಅನುಕೂಲವಾಗುವಂತೆ ಮತ್ತು ವಿದ್ಯಾರ್ಥಿಗಳ ಬೇಡಿಕೆಯನುಸಾರ ಡೀನರುಗಳೊಂದಿಗೆ ಚರ್ಚಿಸಿ ಓರಿಯಂಟೇಶನ್ ಪ್ರೋಗ್ರಾಂಗಳನ್ನು ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರದೊಂದಿಗೆ ಪ್ರಾರಂಭಿಸಲು ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

**:: ನಿರ್ಣಯ ::**

2026–27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕವನ್ನು ಹೆಚ್ಚಿಸದೆ 2025–26ನೇ ಸಾಲಿನ ಶುಲ್ಕವನ್ನೇ ಯಥಾವತ್ತಾಗಿ ಮುಂದುವರೆಸುವ ಬಗ್ಗೆ (ಎಂ.ಎಸ್.ಡಬ್ಲ್ಯೂ ವಿಭಾಗದ ಶುಲ್ಕವನ್ನು ರೂ.30,000/– ಗಳಿಂದ ರೂ.25,000/– ಗಳಿಗೆ ಕಡಿಮೆ ಮಾಡಲಾಗಿರುತ್ತದೆ) ಕೂಲಂಕುಷವಾಗಿ ಚರ್ಚಿಸಿದ ಬಳಿಕ ದಿನಾಂಕ:15.06.2026ರಂದು ನಡೆದ ಸಭೆಯ ನಡಾವಳಿಯನ್ನು ಸಭೆಯು ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಶೈಕ್ಷಣಿಕ ವಿಭಾಗ – 8 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(b)–(08/26) |

## –: ಟಿಪ್ಪಣಿ :–

**ವಿಷಯ:** **ವಿಶ್ವವಿದ್ಯಾನಿಲಯದ 2026–27ನೇ ಶೈಕ್ಷಣಿಕ ಸಾಲಿನ ಎಂ.ಕಾಂ. ಪದವಿಯ ಪ್ರವೇಶಾತಿಗೆ ಹೆಚ್ಚುವರಿ ಸೀಟ್ ಮ್ಯಾಟ್ರಿಕ್ಸ್ ಅನುಮೋದನೆ ನೀಡುವ ಕುರಿತು.**

ಉಲ್ಲೇಖ: 1. ಅಧ್ಯಕ್ಷರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ ದಾವಿವಿ– ಇವರ ಪತ್ರ ಸಂಖ್ಯೆ:ದಾವಿವಿ/ವಾಣಿಜ್ಯ/2026–27/75 ದಿನಾಂಕ:06.07.2026
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:07.08.2026

*****

ವಿಶ್ವವಿದ್ಯಾನಿಲಯದ 2026–27ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ – ಅಧ್ಯಕ್ಷರು, ಸ್ನಾತಕೋತ್ತರ ಎಂ.ಕಾಂ. ಅಧ್ಯಯನ ವಿಭಾಗ – ಇವರು ಹೆಚ್ಚುವರಿ ಸೀಟುಗಳಿಗೆ ಪ್ರವೇಶ ಮಿತಿಯನ್ನು ನಿಗದಿಪಡಿಸಿ ಪರಿಷ್ಕೃತ ಪ್ರಸ್ತುತ ಸೀಟ್ ಮ್ಯಾಟ್ರಿಕ್ಸ್‌ನ್ನು ಸಿದ್ದಪಡಿಸಿ ಅನುಮೋದನೆಗೆ ಉಲ್ಲೇಖ (1)ರ ಪತ್ರದಲ್ಲಿ ಸಲ್ಲಿಸಿರುತ್ತಾರೆ. ಉಲ್ಲೇಖ (2)ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಈ ಕೆಳಕಂಡ ಸೀಟ್ ಮ್ಯಾಟ್ರಿಕ್ಸ್‌ನ್ನು ಅನುಮೋದಿಸಲಾಗಿರುತ್ತದೆ.

### Existing Merit Seat Matrix - 2026-27

| Sl. No | Centre | GM (44%) | SC (17%) | ST (7%) | C1 (4%) | 2A (15%) | 2B (4%) | 3A (4%) | 3B (5%) | KM | NSS | NCC | SG | SP | DQ | PH | OU | HK | TOTAL |
|---|---|---|---|---|---|---|---|---|---|---|---|---|---|---|---|---|---|---|---|
| 1 | Shivaganogtri Main Campus | 13 | 6 | 2 | 1 | 5 | 1 | 1 | 2 | 1 | 1 | 1 | 1 | 1 | 1 | 1 | 2 | 3 | 43 |
| 2 | Jnanagangotri P.G. Centre, Chitradurga | 13 | 6 | 2 | 1 | 5 | 1 | 1 | 2 | 1 | 1 | 1 | 1 | 1 | 1 | 1 | 2 | 3 | 43 |

### Existing Enhanced Merit Seats - 2026-27

| Sl. No | Centre | GM (44%) | SC (17%) | ST (7%) | C1 (4%) | 2A (15%) | 2B (4%) | 3A (4%) | 3B (5%) | OU (15%) | HK (8%) | TOTAL |
|---|---|---|---|---|---|---|---|---|---|---|---|---|
| 1 | Shivaganogtri Main Campus | 32 | 13 | 5 | 3 | 11 | 3 | 3 | 4 | 2 | 6 | 82 |
| 2 | Jnanagangotri P.G. Centre, Chitradurga | 9 | 4 | 1 | 1 | 3 | 1 | 1 | 1 | 2 | 2 | 25 |

### Additional Intake Merit Seats 2026-27

| Sl. No | Centre | GM (44%) | SC (17%) | ST (7%) | C1 (4%) | 2A (15%) | 2B (4%) | 3A (4%) | 3B (5%) | KM | NSS | NCC | SG | SP | DQ | PH | OU | HK | TOTAL |
|---|---|---|---|---|---|---|---|---|---|---|---|---|---|---|---|---|---|---|---|
| 1 | Shivaganogtri Main Campus | 29 | 11 | 04 | 02 | 09 | 02 | 02 | 03 | 01 | 01 | 01 | 01 | 01 | 01 | 01 | 09 | 05 | 83 |
| 2 | Jnanagangotri P.G. Centre, Chitradurga | 13 | 06 | 02 | 01 | 05 | 01 | 01 | 02 | 01 | 01 | 01 | 01 | 01 | 01 | 01 | 05 | 03 | 46 |

ಮುಂದುವರೆದಿದೆ...

ಕುಲಸಚಿವರು

ಕುಲಪತಿಗಳು

## Additional Intake Enhanced Merit Seats - 2026-27

| Sl. No | Centre | GM (44%) | SC (17%) | ST (7%) | C1 (4%) | 2A (15%) | 2B (4%) | 3A (4%) | 3B (5%) | OU (15%) | HK (8%) | TOTAL |
|---|---|---|---|---|---|---|---|---|---|---|---|---|
| 1 | Shivaganogtri Main Campus | 39 | 15 | 6 | 4 | 13 | 4 | 4 | 4 | 13 | 07 | 109 |
| 2 | Jnanagangotri P.G. Centre, Chitradurga | 33 | 12 | 5 | 3 | 11 | 3 | 3 | 4 | 11 | 6 | 91 |

ಸದರಿ ವಿಷಯವನ್ನು ದಿನಾಂಕ:28.08.2026ರಂದು ಏರ್ಪಡಿಸಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ 2026-27ನೇ ಶೈಕ್ಷಣಿಕ ಸಾಲಿನ ಎಂ.ಕಾಂ ಪ್ರವೇಶಾತಿಗೆ ಸಂಬಂಧಿಸಿದಂತೆ ಮೇಲ್ಕಂಡಂತೆ ಹೆಚ್ಚುವರಿ ಸೀಟುಗಳಿಗೆ ಪ್ರವೇಶ ಮಿತಿಯನ್ನು ನಿಗದಿಪಡಿಸಿ ಪರಿಷ್ಕೃತ ಪ್ರಸ್ತುತ ಸೀಟ್ ಮ್ಯಾಟ್ರಿಕ್ಸ್‌ನ ಕುರಿತು ಚರ್ಚಿಸಿ ಸಭೆಯು ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು          ಕುಲಪತಿಗಳು

| ಶೈಕ್ಷಣಿಕ ವಿಭಾಗ – 9 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(c)–(08/26) |

## –: ಟಿಪ್ಪಣಿ :–

ವಿಷಯ: **ಕಬ್ಬೂರ್ ಎಜುಕೇಷನ್ ಸೊಸೈಟಿ, ದಾವಣಗೆರೆ ಇವರು ಸ್ವರ್ಣ ಪದಕ ದೇಣಿಗೆ ನೀಡಿರುವ ಕುರಿತು.**

ಉಲ್ಲೇಖ: 1. ಕಾರ್ಯದರ್ಶಿಗಳು, ಕಬ್ಬೂರ್ ಎಜುಕೇಷನ್ ಸೊಸೈಟಿ, ದಾವಣಗೆರೆ– ಇವರ ಪತ್ರದ ಸಂಖ್ಯೆ:ಕೆಇಎಸ್/05/2026–27, ದಿನಾಂಕ:11.06.2026.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:13.08.2026

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಬ್ಬೂರ್ ಎಜುಕೇಷನ್ ಸೊಸೈಟಿ, ದಾವಣಗೆರೆ –ಇವರು ಪೂಜ್ಯಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ ಇವರ ಹೆಸರಿನಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕ ಬಿ.ಸಿ.ಎ ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸ್ವರ್ಣ ಪದಕವನ್ನು 2027–28ನೇ ಘಟಿಕೋತ್ಸವದಲ್ಲಿ ಪ್ರಧಾನ ಮಾಡಲು ರೂ. 1,00,000/– ಗಳ (ಚೆಕ್ ನಂ.056280 ದಿನಾಂಕ:11.06.2026) ಚೆಕ್‌ನ್ನು ನೀಡಿರುತ್ತಾರೆ. ಈ ಕುರಿತಂತೆ ದಿನಾಂಕ:28.08.2026 ರಂದು ಏರ್ಪಡಿಸಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ. ವಿವರ ಈ ಕೆಳಗಿನಂತಿದೆ.

| Sl. No. | Name of the Doner and Address | Amount DD/Ch.No./ Date | In the Name of | Subject which related to |
|---|---|---|---|---|
| 1. | Dr. Shivaraj Kabbur Founder Kabbur Education Society (R ) Winners Group of Institutions Davangere | Rs.1,00,000/- Cq/DD No:056280, 11.06.2026 | Taralabalu Jagadguru Sri. 1108 Dr. Shivamurthy Shivacharya Mahaswamiji, Endowment Gold Medal | Bachelor of Computer Application **Subject:** Scored Highest Marks in B.C.A First Rank of Davangere University |

### :: ನಿರ್ಣಯ ::

ಪೂಜ್ಯಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ ಇವರ ಹೆಸರಿನಲ್ಲಿ – ಅಧ್ಯಕ್ಷರು, ಕಬ್ಬೂರ್ ಎಜುಕೇಷನ್ ಸೊಸೈಟಿ, ದಾವಣಗೆರೆ ಇವರು – ವಿಶ್ವವಿದ್ಯಾನಿಲಯದ ಸ್ನಾತಕ ಬಿ.ಸಿ.ಎ ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸ್ವರ್ಣ ಪದಕವನ್ನು 2027–28ನೇ ಘಟಿಕೋತ್ಸವದಲ್ಲಿ ಪ್ರಧಾನ ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 10 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(b)-(08/26) |

## –: ಟಿಪ್ಪಣಿ :–

**ವಿಷಯ :** **2027–28ನೇ ಶೈಕ್ಷಣಿಕ ಸಾಲಿನಿಂದ 04 ವರ್ಷಗಳ ಬಿ.ಎ.ಬಿ.ಇಡ್. ಇಂಟಿಗ್ರೇಟೆಡ್ ಕೋರ್ಸ್‌ನ್ನು ಪ್ರಾರಂಭಿಸಲು ಸಂಯೋಜನೆ/ನಿರಾಪೇಕ್ಷಣಾ ಪತ್ರ ನೀಡುವ ಕುರಿತು.**

**ಉಲ್ಲೇಖ :**
1. Ministry of Social Justice & empowerment, Govt of India Ltr No: CRC-DVG/ACAD/ISITEP/2026/10 dated:04.06.2026
2. ಸರ್ಕಾರದ ಪತ್ರ ಸಂ:ಇಡಿ 169 ಯುಎನ್‌ಇ 2026 ದಿನಾಂಕ:14.08.2026

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Composite Regional Centre for Development, Rehabiliation & Empowerment of Person with Disablities (Divyangjan), under administration of Ministry of Social Justice & empowerment, Govt of India - ಇವರು ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಡಿ 2027–28ನೇ ಶೈಕ್ಷಣಿಕ ಸಾಲಿನಿಂದ 04 ವರ್ಷಗಳ ಬಿ.ಎ.ಬಿ.ಇಡ್. ಇಂಟಿಗ್ರೇಟೆಡ್ ಕೋರ್ಸ್‌ನ್ನು ಪ್ರಾರಂಭಿಸಲು ಉದ್ದೇಶಿಸಿರುತ್ತಾರೆ. ಸದರಿ ಕೋರ್ಸ್‌ನ ರೂಪುರೇಷುಗಳನ್ನು ಭಾರತದ ಪುನರ್ವಸತಿ ಮಂಡಳಿಯ ಸಮಗ್ರ ವಿಶೇಷ ಮತ್ತು ಅಂತರ್ಗತ ಶಿಕ್ಷಕರ ಶಿಕ್ಷಣ ನೀತಿ ಕಾರ್ಯಕ್ರಮದಡಿಯಲ್ಲಿ ಸೂಚಿಸಿರುವ ಮಾನದಂಡಗಳು, ನಿಯಮಗಳಿಗನುಗುಣವಾಗಿ ಅಭಿವೃದ್ಧಿಪಡಿಸಲಾಗಿದೆ.

ಸದರಿ ಸಂಸ್ಥೆಯವರು ನಮ್ಮ ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ 04 ವರ್ಷಗಳ ಬಿ.ಎ.ಬಿ.ಇಡ್. ಕೋರ್ಸ್‌ನ ಸಂಯೋಜನೆಗೆ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದ **NOC** ಪಡೆಯುವಂತೆ ಒತ್ತಾಯಿಸಿದೆ, ಸಂಯೋಜನೆಗಾಗಿ ಪ್ರಸ್ತಾವನೆಯನ್ನು ಪರಿಗಣಿಸುವಂತೆ ಅಥವಾ ದಾವಣಗೆರೆಯ **CRC** ವಿಶೇಷ ಸ್ಥಾನಮಾನವನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ವಿನಾಯಿತಿ ನೀಡಲು ಕೋರಿರುತ್ತಾರೆ.

ಉಲ್ಲೇಖ(1)ರ ಪತ್ರದಲ್ಲಿ **Rehabilitation Council of India (RCI)** ಪೋರ್ಟಲ್‌ನಲ್ಲಿ ಕೋರ್ಸ್ ಪ್ರಾರಂಭಿಸುವ ಕುರಿತು ನೋಂದಣಿ ಹಾಗೂ ಅನುಮೋದನೆ ಪಡೆಯುವ ಸಂಬಂಧ ವಿಶ್ವವಿದ್ಯಾನಿಲಯದಿಂದ **NOC** ಕೋರಿ ಮನವಿ ಸಲ್ಲಿಸಿರುತ್ತಾರೆ. ಮುಂದುವರೆದು, ಉಲ್ಲೇಖ (2)ರ ಪತ್ರದಲ್ಲಿ ಸದರಿ ಸಂಸ್ಥೆಗೆ ನಿರಾಪೇಕ್ಷಣಾ ಪತ್ರ ನೀಡಲು ಈ ಸಂಸ್ಥೆಯು ಹೊಂದಿರುವ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಂತೆ Integrated Special Teacher Education Programme (ISITEP) ಕೋರ್ಸ್ ಪ್ರಾರಂಭಿಸಲು ಸರ್ಕಾರವು ನಿರಾಪೇಕ್ಷಣಾ ಪತ್ರವನ್ನು ನೀಡಲು ಸಂಬಂಧಪಟ್ಟ ಮಾನದಂಡಗಳನ್ನು ಪರಿಶೀಲಿಸಿ ಉನ್ನತ ಶಿಕ್ಷಣ ಇಲಾಖೆಗೆ ವಿಶ್ವವಿದ್ಯಾನಿಲಯದ ಅಭಿಪ್ರಾಯ ಸಲ್ಲಿಸಲು ತಿಳಿಸಲಾಗಿದೆ.

ತತ್ಸಂಬಂಧ ಸದರಿಯವರ ಮನವಿ ಹಾಗೂ ಸರ್ಕಾರದ ಸೂಚನೆಯನ್ನು ದಿನಾಂಕ:28.08.2026 ರಂದು ಏರ್ಪಡಿಸಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ಮುಂದುವರೆದಿದೆ...

ಕುಲಸಚಿವರು                    ಕುಲಪತಿಗಳು

**ವಿವರಣೆ:**

- **ಪ್ರೊ. ರಂಗಪ್ಪ ಕೆ.ಬಿ–** ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಷತ್ತು ಮತ್ತು ಮಾನ್ಯ ವಿದ್ಯಾವಿಷಯಕ ಪರಿಷತ್ತು ಸದಸ್ಯರು, ಇವರು 2027–28ನೇ ಶೈಕ್ಷಣಿಕ ಸಾಲಿನಿಂದ 04 ವರ್ಷಗಳ ಬಿ.ಎ., ಬಿ.ಎಡ್. ಇಂಟಿಗ್ರೇಟೆಡ್ ಕೋರ್ಸ್‌ನ್ನು ಪ್ರಾರಂಭಿಸುವ ಕುರಿತು ಸರ್ಕಾರವು ನಿರಪೇಕ್ಷಣಾ ಪತ್ರ ನೀಡುವ ಸಂಬಂಧ ವಿಶ್ವವಿದ್ಯಾನಿಲಯದ ಅಭಿಪ್ರಾಯ ಕೋರಿರುತ್ತಾರೆ. ಆದ್ದರಿಂದ ವಿಶ್ವವಿದ್ಯಾನಿಲಯವು ಸಮಿತಿಯೊಂದರಿಂದ ಪರಿಶೀಲನೆ ನಡೆಸಿ ಸಮಿತಿಯ ಶಿಫಾರಸ್ಸಿನನ್ವಯ ವಿಶ್ವವಿದ್ಯಾನಿಲಯದ ಅಭಿಪ್ರಾಯವನ್ನು ಪತ್ರದ ಮೂಲಕ ಸರ್ಕಾರಕ್ಕೆ ತಿಳಿಸಬಹುದೆಂದು ಸಭೆಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು.

**:: ನಿರ್ಣಯ ::**

Composite Regional Centre for Development, Davangere - ಸಂಸ್ಥೆಯು ಭಾರತ ಸರ್ಕಾರದ ಅಂಗಸಂಸ್ಥೆಯಾಗಿದ್ದು, Integrated Special Teacher Education Programme (ISITEP) ಕೋರ್ಸ್‌ನ್ನು ವಿಶೇಷ ಚೇತನ ಮಕ್ಕಳಿಗೆ ಬೋಧಿಸುವ ಶಿಕ್ಷಕರಿಗಾಗಿ ಸಿದ್ಧಪಡಿಸಲಾಗಿರುತ್ತದೆ. ಸದರಿ ಸಂಸ್ಥೆಯು ISITEP ಕೋರ್ಸ್‌ನ್ನು **RCI** ನಿಂದ ಮಾನ್ಯತೆ ಪಡೆದು ಪ್ರಾರಂಭಿಸಲು ಉದ್ದೇಶಿಸಿರುತ್ತಾರೆ.

ಈ ಸಂಬಂಧ ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ ISITEP ಕೋರ್ಸ್‌ಗೆ Rehabilitation Council of India **(RCI)** ಮಾನದಂಡಗಳನುಸಾರ CRC Davangere ಯಲ್ಲಿ ಪ್ರಾರಂಭಿಸಲು ಸಂಸ್ಥೆ ಹೊಂದಿರುವ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಲು ವಿಶ್ವವಿದ್ಯಾನಿಲಯದಿಂದ ನಿಯೋಜಿಸಲ್ಪಡುವ ಸಮಿತಿಯ ವರದಿಯನ್ನು ಆಧರಿಸಿ ವಿಶ್ವವಿದ್ಯಾನಿಲಯದ ಅಭಿಪ್ರಾಯವನ್ನು ಸರ್ಕಾರಕ್ಕೆ ಪತ್ರಿಸಲು ವಿದ್ಯಾವಿಷಯಕ ಪರಿಷತ್ತು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 11 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(b)-(08/26) |

# -: ಟಿಪ್ಪಣಿ :-

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ತುರುವನೂರು – ಇಲ್ಲಿನ 2026-27ನೇ ಶೈಕ್ಷಣಿಕ ಸಾಲಿನ ಪ್ರವೇಶಮಿತಿ ಅನುಮೋದನೆ ನೀಡುವ ಕುರಿತು.**

ಉಲ್ಲೇಖ:
1. ಸಂಯೋಜನಾಧಿಕಾರಿಗಳು, ದಾ.ವಿ.ಘ.ಕಾ. ತುರುವನೂರು – ಇವರ ಪತ್ರ ಸಂ:ದಾವಿವಿ/ಘಕಾ/2025-26/173 ದಿನಾಂಕ:06.06.2026
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20.06.2026

*********

ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ – ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ತುರುವನೂರು, ಇಲ್ಲಿನ ಸಂಯೋಜನಾಧಿಕಾರಿಗಳು ಉಲ್ಲೇಖಿತ(1) ಪತ್ರದಲ್ಲಿ 2026-27ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡ **ವಿವಿಧ ಹೆಚ್ಚುವರಿ ಸ್ನಾತಕ ಪದವಿ** ಕೋರ್ಸ್/ಸಮೂಹಗಳಿಗೆ ಪ್ರವೇಶ ಮಿತಿ ಅನುಮೋದನೆ ನೀಡುವಂತೆ ಕೋರಿರುತ್ತಾರೆ. ಸದರಿ ವಿಷಯನ್ನು ಪರಿಶೀಲಿಸಲಾಗಿದ್ದು, ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ 2026-27ನೇ ಸಾಲಿನಲ್ಲಿ ಅನುಮೋದನೆ ನೀಡಿರುವ ಪದವಿ/ಕೋರ್ಸ್‌ಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಪದವಿ | ವಿಷಯ/ಸಮೂಹ | ಪ್ರವೇಶ ಮಿತಿ |
|---|---|---|---|
| 1 | ಬಿ.ಎ. | ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ – HEP | 60 |
| | | ಇತಿಹಾಸ, ಅರ್ಥಶಾಸ್ತ್ರ, ಇಂಗ್ಲೀಷ್ – HEEn | 60 |
| | | ಇತಿಹಾಸ, ರಾಜ್ಯಶಾಸ್ತ್ರ, ಇಂಗ್ಲೀಷ್ – HPEn | 60 |
| | | ಇತಿಹಾಸ, ರಾಜ್ಯಶಾಸ್ತ್ರ, ಕನ್ನಡ – HPK | 60 |

ತತ್ಸಂಬಂಧವಾಗಿ, ದಿನಾಂಕ:28.08.2026ರಂದು ಏರ್ಪಡಿಸಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

2026-27ನೇ ಶೈಕ್ಷಣಿಕ ಸಾಲಿನಿಂದ ಈ ಮೇಲ್ಕಂಡ ಪಟ್ಟಿಯಲ್ಲಿ ನಮೂದಿಸಿರುವಂತೆ **ವಿವಿಧ ಹೆಚ್ಚುವರಿ ಸ್ನಾತಕ ಪದವಿ** ಕೋರ್ಸ್/ಸಮೂಹಗಳಿಗೆ ಪ್ರವೇಶ ಮಿತಿ ನೀಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 12 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(c)–(08/26) |

# –: ಟಿಪ್ಪಣಿ :–

ವಿಷಯ: **2026–27ನೇ ಶೈಕ್ಷಣಿಕ ಸಾಲಿಗೆ ಬಿ.ಕಾಂ. (AEDP) ಕೋರ್ಸುಗಳಿಗೆ ಪಠ್ಯಕ್ರಮ ರಚಿಸಿಕೊಡುವ ಕುರಿತು.**

ಉಲ್ಲೇಖ: 1. ಸರ್ಕಾರದ ಆದೇಶ ಪತ್ರ ಸಂ:ಇಡಿ 93 ಡಿಸಿಇ 2026(ಇ) ಬೆಂಗಳೂರು, ದಿನಾಂಕ:13.05.2026
2. ದಾವಿವಿ/ಸಿಡಿಸಿ/ಸಂಯೋ–155/2026–27/1610 ದಿನಾಂಕ:05.06.2026
3. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:21.07.2026

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದನುಸಾರ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸರ್ಕಾರಿ ಕಾಲೇಜುಗಳಲ್ಲಿ 2026–27ನೇ ಶೈಕ್ಷಣಿಕ ಸಾಲಿನಿಂದ ಬಿ.ಕಾಂ. ಪದವಿಯ ಈ ಕೆಳಕಂಡ ಎಐಡಿಪಿ ಕೋರ್ಸುಗಳಿಗೆ ಸರ್ಕಾರ ಅನುಮತಿ ನೀಡಿರುತ್ತದೆ.

| ಬಿ.ಕಾಂ. (AEDP) | | | |
|---|---|---|---|
| 1 | ವಾಣಿ ಸಕ್ಕರೆ ಸ.ಪ್ರ.ದ.ಕಾ. ಹಿರಿಯೂರು. | ನೂತನ ಕೋರ್ಸು(AEDP) | B.Com (E-Commerce Operations AEDP) |
| 2 | ಸ.ಪ್ರ.ದ.ಕಾ. ಹೊನ್ನಾಳಿ. | ನೂತನ ಕೋರ್ಸು(AEDP) | B.Com (BFSI AEDP) |
| 3 | ಹೆಚ್.ಪಿ.ಪಿ.ಸಿ.ಸ.ಪ್ರ.ದ.ಕಾ. ಚಳ್ಳಕೆರೆ | ನೂತನ ಕೋರ್ಸು(AEDP) | B.Com (Human Resource Operations AEDP) |
| 4 | ಸ.ಪ್ರ.ದ.ಕಾ. ಹೊಸದುರ್ಗ | ನೂತನ ಕೋರ್ಸು(AEDP) | B.Com. (Retail Operations AEDP) |
| 5 | ಸ.ಪ್ರ.ದ.ಕಾ. ಹೊಳಲ್ಕೆರೆ. | ನೂತನ ಕೋರ್ಸು(AEDP) | B.Com (BFSI AEDP) |
| 6 | ಸ.ಪ್ರ.ದ.ಕಾ. ಹರಿಹರ. | ನೂತನ ಕೋರ್ಸು(AEDP) | B.Com (Logistics AEDP) |
| 7 | ಸ.ಪ್ರ.ದ.ಮ.ಕಾ. ಚಿತ್ರದುರ್ಗ | ನೂತನ ಕೋರ್ಸು(AEDP) | B.Com. (Retail Operations AEDP) |

ಅದರಂತೆ ಉಲ್ಲೇಖ (2)ರಲ್ಲಿ ಈಗಾಗಲೇ ಸರ್ಕಾರಿ ಕಾಲೇಜುಗಳಿಗೆ ಸಂಯೋಜನಾ ಆದೇಶ ನೀಡಲಾಗಿರುತ್ತದೆ. ದಿನಾಂಕ:21.07.2026ರಂದು ನಡೆದ ಆನ್‌ಲೈನ್ ಸಭೆಯ ಚರ್ಚೆಯ ಬಳಿಕ ಮಾನ್ಯ ಕುಲಪತಿಗಳು ನಿರ್ದೇಶಿಸಿದಂತೆ ಸದರಿ ಹೊಸ ಕೋರ್ಸುಗಳಿಗೆ ಅಗತ್ಯ ಪಠ್ಯಕ್ರಮ ರಚಿಸುವ ಕುರಿತು ಸಂಬಂಧಪಟ್ಟ ವಿಭಾಗಕ್ಕೆ ಪತ್ರಿಸಲಾಗಿರುತ್ತದೆ.

ತತ್ಸಂಬಂಧವಾಗಿ, 2026–27ನೇ ಸಾಲಿನಿಂದ ಸರ್ಕಾರ ಅನುಮತಿ ನೀಡಿರುವ ಬಿ.ಕಾಂ.(AEDP) ಕೋರ್ಸುಗಳಿಗೆ ಸಂಯೋಜನೆ ಆದೇಶ ನೀಡಲಾಗಿರುತ್ತದೆ. ಈ ಕುರಿತು ದಿನಾಂಕ:28.08.2026ರಂದು ಏರ್ಪಡಿಸಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

ಮುಂದುವರೆದಿದೆ...

ಕುಲಸಚಿವರು

ಕುಲಪತಿಗಳು

**ವಿವರಣೆ:**

- **ಪ್ರೊ. ಶ್ರೀನಿವಾಸ ಕೆ.ಟಿ–** ಪ್ರಾಧ್ಯಾಪಕರು ಮತ್ತು ಡೀನರು, ವಾಣಿಜ್ಯ ನಿಕಾಯ ಮತ್ತು ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ಇವರು ಸರ್ಕಾರದ ಆದೇಶದ ಪತ್ರದನುಸಾರ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸರ್ಕಾರಿ ಕಾಲೇಜುಗಳಲ್ಲಿ ಮಾತ್ರ 2026–27ನೇ ಶೈಕ್ಷಣಿಕ ಸಾಲಿನಿಂದ ಬಿ.ಕಾಂ. ಎಐಡಿಪಿ ಕೋರ್ಸುಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದಿಂದ ಪಠ್ಯ ಕ್ರಮ ರಚನೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಭೆಗೆ ವಿವಸಿದರು.

**:: ನಿರ್ಣಯ ::**

ಸರ್ಕಾರಿ ಕಾಲೇಜುಗಳಿಗೆ 2026–27ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರ ಅನುಮತಿ ನೀಡಿರುವ ಬಿ.ಕಾಂ. (AEDP) ಹೊಸ ಕೋರ್ಸುಗಳಿಗೆ ಅಗತ್ಯ ಪಠ್ಯಕ್ರಮ ರಚನೆಗೆ ಹಾಗೂ ಸಂಯೋಜನೆ ಆದೇಶ ನೀಡಿರುವುದಕ್ಕೆ ಸಭೆಯು ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು - 13 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(d)-(08/26) |

## -: ಟಿಪ್ಪಣಿ :-

ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ School of Engineering Course ಮತ್ತು Bachelor of Computer Applications (BCA) ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:07.08.2026

*********

2027-28ನೇ ಶೈಕ್ಷಣಿಕ ಸಾಲಿನಿಂದ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ **School of Engineering Course** ಮತ್ತು **Bachelor of Computer Applications (BCA)** ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ದಿನಾಂಕ:28.08.2026ರಂದು ಏರ್ಪಡಿಸಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಸಲ್ಲಿಸಲಾಗಿದೆ.

**ವಿವರಣೆ:**

- **ಪ್ರೊ. ಗೋಪಿನಾಥ ಎಸ್.ಎಂ-** ಪ್ರಾಧ್ಯಾಪಕರು ಮತ್ತು ಮತ್ತು ಮಾನ್ಯ ವಿದ್ಯಾವಿಷಯಕ ಪರಿಷತ್ತು ಸದಸ್ಯರು, ಇವರು ಸದರಿ ಕೋರ್ಸ್ ಪ್ರಾರಂಭಿಸಿದ್ದಲ್ಲಿ ವಿಶ್ವವಿದ್ಯಾನಿಲಯದ ರೆವಿನ್ಯೂ ಹಾಗೂ ಸಂಬಳ ಮತ್ತು ಇನ್ನಿತರೆ ಖರ್ಚು-ವೆಚ್ಚಗಳ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾರಂಭಿಸಬಹುದಾಗಿದೆ. ಮುಂದುವರೆದು ಬಿ.ಸಿ.ಎ ಕೋರ್ಸ್‌ನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಪ್ರಾರಂಭಿಸುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.
- **ಪ್ರೊ. ಲೋಕೇಶ ಎಂ.ಯು-** ಡೀನರು, ಕಲಾ ನಿಕಾಯ ಮತ್ತು ಮಾನ್ಯ ವಿದ್ಯಾವಿಷಯಕ ಪರಿಷತ್ತು ಸದಸ್ಯರು, ಇವರು ಮಾತನಾಡಿ ಬಿ.ಸಿ.ಎ ಮತ್ತು ಎಂ.ಸಿ.ಎ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರದಲ್ಲಿ ಸದರಿ ಕೋರ್ಸನ್ನು ಪ್ರಾರಂಭಿಸಲಾಗಿದ್ದು, ಈ ಕೋರ್ಸ್‌ಗಳು ಉತ್ತಮವಾಗಿ ನಡೆಯುತ್ತಿವೆ ಆದ್ದರಿಂದ ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಾರಂಭಿಸುವುದು ಸೂಕ್ತವೆಂದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.
- **ಪ್ರೊ. ನಾಗಸ್ವರೂಪ ಹೆಚ್.ಪಿ-** ಪ್ರಾಧ್ಯಾಪಕರು ಮತ್ತು ಮಾನ್ಯ ವಿದ್ಯಾವಿಷಯಕ ಪರಿಷತ್ತು ಸದಸ್ಯರು, ಇವರು ಮಾತನಾಡಿ ಸದರಿ ಕೋರ್ಸ್‌ಗಳನ್ನು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸುತ್ತಿರುವುದು ಹರ್ಷದಾಯಕ ವಿಷಯವಾಗಿದೆ. ಬಿ.ಸಿ.ಎ ಕೋರ್ಸ್‌ನ ಜೊತೆಯಲ್ಲಿ ಇನ್ನೀತರೆ ಕೌಶಲ್ಯಾಧಾರಿತ ಕೋರ್ಸ್‌ಗಳನ್ನು ಪ್ರಾರಂಭಿಸಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ಮುಂದುವರೆದಿದೆ...**

ಕುಲಸಚಿವರು

ಕುಲಪತಿಗಳು

- **ಮಾನ್ಯ ಕುಲಪತಿಗಳು** ಸಭೆಯ ಸದಸ್ಯರ ವಿವರಣೆಯನ್ನು ಪರಿಗಣಿಸಿ ಬಿ.ಸಿ.ಎ ಕೋರ್ಸ್‌ನ್ನು ಘಟಕ ಕಾಲೇಜುಗಳಲ್ಲಿ ಪ್ರಾರಂಭಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. ಹಾಗೆಯೇ ಹಂತ ಹಂತವಾಗಿ ಸದರಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಮೂಲಭೂತ ಸೌಲಭ್ಯಗಳು ಮತ್ತು ಲ್ಯಾಬರೇಟರಿ ಇನ್ನಿತರೆ ಸೌಲಭ್ಯಗಳಿಗೆ ಸರ್ಕಾರದಿಂದ ಅನುದಾನವನ್ನು ಬಿಡುಗಡೆಗೊಳಿಸಲು ಶಿಫಾರಸ್ಸು ಮಾಡುವಂತೆ ಮಾನ್ಯ ಶ್ರೀ ಅಬ್ದುಲ್ ಜಬ್ಬಾರ್, ವಿಧಾನ ಪರಿಷತ್ತು ಸದಸ್ಯರು ಮತ್ತು ವಿದ್ಯಾವಿಷಯಕ ಪರಿಷತ್ತು ಸದಸ್ಯರು ಇವರಿಗೆ ಕೋರಿದರು. ಮುಂದುವರೆದು ಈ ಬಗ್ಗೆ ಸದರಿ ಕೋರ್ಸ್ ಪ್ರಾರಂಬಿಸಲು ಸಮಿತಿಯನ್ನು ರಚಿಸಿ ನಂತರದಲ್ಲಿ ಸಾಧಕ-ಬಾಧಕಗಳನ್ನು ನೋಡಿಕೊಂಡು AICTE ಯ ಅನುಮೋದನೆ ಬಂದ ನಂತರ ಮುಂದಿನ ದಿನಗಳಲ್ಲಿ ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

**:: ನಿರ್ಣಯ ::**

2027–28ನೇ ಶೈಕ್ಷಣಿಕ ಸಾಲಿನಿಂದ School of Engineering Course ಮತ್ತು Bachelor of Computer Applications (BCA) ಪದವಿ ಕೋರ್ಸ್‌ಗಳ ಜೊತೆಗೆ MCA, MBA ಹಾಗೂ ಇನ್ನಿತರೆ ಕೋರ್ಸುಗಳನ್ನು ವಿಶ್ವವಿದ್ಯಾನಿಲಯ, ಘಟಕ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಾರಂಭಿಸುವ ಕುರಿತು ಸಮಿತಿಯನ್ನು ರಚಿಸಲು ಸುದೀರ್ಘ ಚರ್ಚೆಯ ನಂತರ ಸಭೆಯು ಒಮ್ಮತದಿಂದ ಅನುಮೋದಿಸಿತು ಮತ್ತು ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು | ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 14 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.02(d)–(08/26) |

# –: ಟಿಪ್ಪಣಿ :–

**ವಿಷಯ: ಡಾ. ಧನಂಜಯ ಬಿ.ಜಿ. ಮಾನ್ಯ ವಿದ್ಯಾವಿಷಯಕ ಪರಿಷತ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಪ್ರಸ್ತಾವನೆ ಕುರಿತು.**

*********

ಡಾ. ಧನಂಜಯ ಬಿ.ಜಿ. ಮಾನ್ಯ ವಿದ್ಯಾವಿಷಯಕ ಪರಿಷತ್ ಸದಸ್ಯರು, – ಇವರು ಈ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| | |
|---|---|
| ಪ್ರಸ್ತಾವನೆ:1 | **ವಿದ್ಯಾರ್ಥಿಗಳ ಪ್ರವೇಶಾತಿಯಲ್ಲಿ ಸುಧಾರಣೆ:**<br>ವಿದ್ಯಾರ್ಥಿಗಳು ಯುಯುಸಿಎಂಎಸ್ ಮೂಲಕ ಪ್ರವೇಶ ಪಡೆಯುವಾಗ ಪ್ರವೇಶ ಶುಲ್ಕವನ್ನು ಚಲನ್ ಮೂಲಕ ಪಾವತಿಸಿ ನಂತರ ಚಲನ್‌ನನ್ನು ಯುಯುಸಿಎಂಎಸ್ UUCMS portal ನಲ್ಲಿ Upload ಮಾಡುವ ಕ್ರಮ ಚಾಲ್ತಿಯಲ್ಲಿದ್ದು ಇದರಿಂದ ಸಮಯ ಹಾಗೂ ಶ್ರಮ ವ್ಯರ್ಥವಾಗುತ್ತಿದೆ. ಸರ್ವರ್ ತೊಂದರೆ ಇರುವಾಗ ಆಪ್‌ಲೋಡ್ ಮಾಡಲು ಸಾಧ್ಯವಾಗುತ್ತಿರಲಿಲ್ಲ ಇದರಿಂದ ಕೆಲವು ವಿದ್ಯಾರ್ಥಿಗಳು ಆಪ್‌ಲೋಡ್ ಮಾಡಿರುವುದಿಲ್ಲ ನಂತರ ವಿ.ವಿ ಯ ದಿನಾಂಕ ಮುಗಿದಿರುತ್ತದೆ ನಂತರ ದಿನಾಂಕವನ್ನು ದಂಡ ಶುಲ್ಕದೊಂದಿಗೆ ಮುಂದುವರೆಸಿರುತ್ತಿರಿ ಅದರಂತೆ ಚಲನ್ ದಿನಾಂಕ ಮತ್ತು ಅಪ್‌ಲೋಡ್ ದಿನಾಂಕ ಹೊಂದಿಕೆಯಾಗದಿರುವ ಕಾರಣ ಗೊಂದಲ ಉಂಟಾಗುತ್ತಿದೆ. ಆದ್ದರಿಂದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಶುಲ್ಕವನ್ನು ವಿ.ವಿ ಖಾತೆಗೆ ನೇರವಾಗಿ ಆನ್‌ಲೈನ್ ಮೂಲಕ ಪಾವತಿಸುವ ಕ್ರಮ ಅಳವಡಿಸುವುದು ಅತ್ಯಂತ ಅವಶ್ಯವಾಗಿರುತ್ತದೆ. |
| ನಿರ್ಣಯ: | ಮಾನ್ಯ ಕುಲಪತಿಗಳು ವಿದ್ಯಾರ್ಥಿಗಳ ಪ್ರವೇಶಾತಿ ಸುಧಾರಣೆಯ ಬಗ್ಗೆ UUCMS portal ನಲ್ಲಿರುವ ನ್ಯೂನ್ಯತೆಗಳ ಕುರಿತು ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು. |
| ಪ್ರಸ್ತಾವನೆ:2 | **ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆ:**<br>ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿಗೆ ಅಂತಿಮ ದಿನಾಂಕವನ್ನು ಸಾಕಷ್ಟು ಮುಂಚಿತವಾಗಿ ತಿಳಿಸಿ ವಿದ್ಯಾರ್ಥಿಗಳ ಶುಲ್ಕದ ಮೊತ್ತವನ್ನು ಹೊಂದಿಸಿಕೊಳ್ಳಲು ಸಮಯಾವಕಾಶವನ್ನು ನೀಡುವುದು ಅಗತ್ಯವಾಗಿರುತ್ತದೆ ಇಲ್ಲವಾದಲ್ಲಿ ಕಡಿಮೆ ಕಾಲವಧಿಯಲ್ಲಿ ಶುಲ್ಕವನ್ನು ಪಾವತಿಸುವುದು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. |
| ನಿರ್ಣಯ: | ಕುಲಸಚಿವರು (ಪ) ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿಗೆ ಒಂದು ತಿಂಗಳ ಕಾಲಾವಕಾಶ ನೀಡಲಾಗುತ್ತದೆ. ನಂತರವೂ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿಗೆ ಅವಕಾಶ ಕಲ್ಪಿಸಲಾಗುವುದೆಂದು ಸಭೆಗೆ ತಿಳಿಸಿದರು. |
| ಪ್ರಸ್ತಾವನೆ:3 | ಕಾಲೇಜು ಬದಲಾವಣೆ, ಒಂದು ಅಥವಾ ಎರಡು ವರ್ಷ ತಡವಾಗಿ ಪ್ರವೇಶ ಕೋರುವ ಮುಂತಾದ ವಿಶೇಷ ಪ್ರಕರಣಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಶುಲ್ಕವನ್ನು ಕಡಿಮೆ ಮಾಡಿ ಸುಲಭವಾಗಿ ಪ್ರವೇಶ ಪಡೆಯಲು ಅನುವು ಮಾಡಿಕೊಡುವುದು ಅಗತ್ಯವಾಗಿರುತ್ತದೆ. |
| ನಿರ್ಣಯ: | ಮಾನ್ಯ ಕುಲಪತಿಗಳು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಬೇರೆ ವಿಶ್ವವಿದ್ಯಾನಿಲಯಗಳಿಗೆ ಹೋಲಿಸಿದರೆ ನಮ್ಮ ವಿಶ್ವವಿದ್ಯಾನಿಲಯದ ಶುಲ್ಕವು ಕಡಿಮೆ ಇದೆ ಎಂದು ತಿಳಿಸಿದರು. ಆದ್ದರಿಂದ ಸದರಿ ಶುಲ್ಕವನ್ನು ಮುಂದುವರೆಸಲು ನಿರ್ಣಯಿಸಲಾಯಿತು. |

ಕುಲಸಚಿವರು　　　　　　　　　　ಕುಲಪತಿಗಳು

| | |
|---|---|
| ಪ್ರಸ್ತಾವನೆ:4 | **ಉಪಯುಕ್ತ ಮಾಹಿತಿಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಬಗ್ಗೆ:**<br>ಪರೀಕ್ಷೆ, ಮರು ಮೌಲ್ಯಮಾಪನ, ಮರು ಸಂಕಲನ ದಿನಾಂಕ ವಿಸ್ತರಣೆ ಮುಂತಾದ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿರುವ ಮಾಹಿತಿಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಮುಂಚಿತವಾಗಿ ಪ್ರಕಟಿಸುವ ಮೂಲಕ ವಿದ್ಯಾರ್ಥಿಗಳಿಗೆ ಮಾಹಿತಿ ತಿಳಿಯುವಂತೆ ಮಾಡುವುದು ಅಗತ್ಯವಾಗಿರುತ್ತದೆ. |
| ನಿರ್ಣಯ: | ಈಗಾಗಲೇ ಸರ್ಕಾರದ ನಿರ್ದೇಶನದಂತೆ ವೆಬ್‌ಸೈಟ್ ನಿರ್ವಹಣೆಯನ್ನು ಮಾಡುತ್ತಿದ್ದು ಇನ್ನಷ್ಟು ಉನ್ನತೀಕರಿಸಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |
| ಪ್ರಸ್ತಾವನೆ:5 | **ಪಿ.ಎಂ.ಕೆ.ವಿ.ವೈ. ಪರಿಣಾಮಕಾರಿ ಅನುಷ್ಠಾನ:**<br>ಸೂಕ್ತವಾದ ಮಾರ್ಗದರ್ಶನದೊಂದಿಗೆ ನಿಗದಿತ ವೇಳಾಪಟ್ಟಿಯೊಂದಿಗೆ ಗೊಂದಲಗಳು ಇಲ್ಲದಂತೆ ಪಿ.ಎಂ.ಕೆ.ವಿ.ವೈ. ಪರಿಣಾಮಕಾರಿ ಅನುಷ್ಠಾನ ಅತ್ಯವಾಶ್ಯವಾಗಿರುತ್ತದೆ. |
| ನಿರ್ಣಯ: | ಪಿ.ಎಂ.ಕೆ.ವಿ.ವೈ. ಪರಿಣಾಮಕಾರಿ ಅನುಷ್ಠಾನ ಬಗ್ಗೆ ಸರ್ಕಾರದ ನಿರ್ದೇಶಾನುಸಾರ ಸಭೆ ನಡೆಸಿ ನಂತರ ಕ್ರಮವಹಿಸಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |

ಕುಲಸಚಿವರು

ಕುಲಪತಿಗಳು

# ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇನ್ನಿತರೆ ವಿಷಯಗಳು

| ಹಣಕಾಸು ವಿಭಾಗ – 1 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(a)–(08/26) |

## –: ಟಿಪ್ಪಣಿ :–

**ವಿಷಯ: 2024–25ನೇ ಸಾಲಿನ ಲೆಕ್ಕ ಪರಿಶೋಧನ ವರದಿ ಹಾಗೂ ಅನುಸರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:08.07.2026

*********

2024–25ನೇ ಸಾಲಿನ ಲೆಕ್ಕ ಪರಿಶೋಧನ ವರದಿ ಹಾಗೂ ಅನುಸರಣಾ ವರದಿಯನ್ನು ಸಿದ್ಧಪಡಿಸಿ, ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ, ಉಲ್ಲೇಖಿತ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ದಿನಾಂಕ:17.07.2026ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಆದುದರಿಂದ, ಸದರಿ ವಿಷಯವನ್ನು ದಿನಾಂಕ:28.08.2026ರಂದು ಜರುಗುವ ವಿದ್ಯಾವಿಷಯಕ ಪರಿಷತ್ತು ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಅನುಸರಣಾ ವರದಿಯನ್ನು ಸಿದ್ಧಪಡಿಸಿ ದಿನಾಂಕ:17.07.2026 ರಂದು ಸರ್ಕಾರಕ್ಕೆ ಸಲ್ಲಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಹಣಕಾಸು ವಿಭಾಗ – 2 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(b)–(08/26) |

# –: ಟಿಪ್ಪಣಿ :–

**ವಿಷಯಃ ವಿಶ್ವವಿದ್ಯಾನಿಲಯದ 2025–26ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ Balance Sheet ಗಳ ಅನುಮೋದನೆ ಕುರಿತು.**

*********

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000, ಸೆಕ್ಷನ್ 48 ರನ್ವಯ ವಿಶ್ವವಿದ್ಯಾನಿಲಯದ 2025–26ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ 2025–26ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿದ್ದು ಸದರಿ ವಿಷಯವನ್ನು ದಿನಾಂಕ:28.08.2026ರಂದು ಜರುಗುವ ವಿದ್ಯಾವಿಷಯಕ ಪರಿಷತ್ತು ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಲಾಗಿದೆ.

## :: ನಿರ್ಣಯ ::

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000, ಸೆಕ್ಷನ್ 48 ರನ್ವಯ ವಿಶ್ವವಿದ್ಯಾನಿಲಯದ 2025–26ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ನಿಯಮಾನುಸಾರ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ – 3 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(c)-(08/26) |

## -: ಟಿಪ್ಪಣಿ :-

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ(ಪಿಜಿ) ವಿದ್ಯಾರ್ಥಿಗಳ ಪಠ್ಯಕ್ರಮದಲ್ಲಿ "Integrated Personality Development Course" (IPDC) ಅನ್ನು ಮೌಲ್ಯವರ್ಧಿತ ಕೋರ್ಸ್ (Value Added Course) ಆಗಿ ಅಳವಡಿಸುವ ಕುರಿತು.**

ಉಲ್ಲೇಖ: 1. ಸಾಧು ತೀರ್ಥಸ್ವರೂಪದಾಸ್, **IPDC** ಆಡಳಿತ ಕಛೇರಿ, **BAPS** ಸಂಸ್ಥೆ ಇವರಿಂದ ಬಂದಿರುವ ಪ್ರಸ್ತಾವನೆ ಪತ್ರ ದಿನಾಂಕ:30.07.2026
2.ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:07.08.2026

*********

ಬಿ.ಎ.ಪಿ.ಎಸ್ **(B.A.P.S)** ಸಂಸ್ಥೆಯ **IPDC** ಆಡಳಿತ ಕಛೇರಿಯಿಂದ ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ **Integrated Personality Development Course" (IPDC)** ಎಂಬ ಮೌಲ್ಯ ಆಧಾರಿತ ಕೋರ್ಸ್ ಅನ್ನು ಪರಿಸಚಯಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಕೋರ್ಸ್ ಪ್ರಮುಖ ಉದ್ದೇಶ ವಿದ್ಯಾರ್ಥಿಗಳಲ್ಲಿ ನೈತಿಕತೆ, ಚಾರಿತ್ರ್ಯ ನಿರ್ಮಾಣ, ಜೀವನ ಕೌಶಲ್ಯಗಳು ಹಾಗೂ ಸಮಗ್ರ ವ್ಯಕ್ತಿತ್ವ ವಿಕಸನವನ್ನು ಮೂಡಿಸುವುದು. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಮೌಲ್ಯಧಾರಿತ ಕೋರ್ಸ್ **(Value Added Course/Credit-based)** ಅವಧಿ-2 ಸೆಮಿಸ್ಟರ್‌ಗಳು ಈಗಾಗಲೇ ಹಲವು ಪ್ರಮುಖ ವಿಶ್ವವಿದ್ಯಾನಿಲಯಗಳು ಈ ಕೋರ್ಸ್ ಅನ್ನು ಅಳವಡಿಸಿಕೊಂಡಿರುತ್ತವೆ.

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೋರ್ಸ್‌ಗಳ ಪಠ್ಯಕ್ರಮದಲ್ಲಿ **IPDC** ಕೋರ್ಸ್ ಅನ್ನು ಮೌಲ್ಯವರ್ಧಿತ ಕೋರ್ಸ್**(Value Added Course)** ಆಗಿ ಮುಂಬರುವ ಶೈಕ್ಷಣಿಕ ಸಾಲಿನಿಂದ ಜಾರಿಗೆ ತರಲು ದಿನಾಂಕ:28.08.2026ರಂದು ಜರುಗುವ ವಿದ್ಯಾವಿಷಯಕ ಪರಿಷತ್ತು ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

**ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ(ಪಿಜಿ) ವಿದ್ಯಾರ್ಥಿಗಳ ಪಠ್ಯಕ್ರಮದಲ್ಲಿ "Integrated Personality Development Course" (IPDC)** ಅನ್ನು ಮೌಲ್ಯವರ್ಧಿತ ಕೋರ್ಸ್ **(Value Added Course)** ಅನ್ನು ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು                    ಕುಲಪತಿಗಳು

| ಅಧ್ಯಯನ ಮಂಡಳಿ – 4 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(d)–(08/26) |

## –಼ ಟಿಪ್ಪಣಿ ಃ–

ವಿಷಯಃ 2026–27ನೇ ಶೈಕ್ಷಣಿಕ ಸಾಲಿನಿಂದ **Short-Term Skill Development** ಕೋರ್ಸ್‌ಗಳ ಪಠ್ಯಕ್ರಮಗಳನ್ನು ಪರಿಚಯಿಸುವ ಕುರಿತು.

ಉಲ್ಲೇಖಃ ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:27.08.2026

*********

2026–27ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ/ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ ವಿವಿಧ ಅಧ್ಯಯನ ಮಂಡಳಿ ಅಧ್ಯಕ್ಷರುಗಳು ಅಧ್ಯಯನ ಮಂಡಳಿ ಸಭೆ ನಡೆಸಿ **Short-Term Skill Development** ಕೋರ್ಸ್‌ನ ಮಾರ್ಗಸೂಚಿಗಳನ್ವಯ ಪಠ್ಯಕ್ರಮ ರಚನೆ ಮಾಡಿ ಸಲ್ಲಿಸಿದ್ದಲ್ಲಿ ವಿವಿಧ ನಿಕಾಯಗಳ ಸಭೆ ಹಾಗೂ ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ ಪಠ್ಯಕ್ರಮವನ್ನು ಪರಿಚಯಿಸಲು ದಿನಾಂಕ:28.08.2026ರಂದು ಜರುಗುವ ವಿದ್ಯಾವಿಷಯಕ ಪರಿಷತ್ತು ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**ವಿವರಣೆ:**

- **ಡಾ. ಧನಂಜಯ ಬಿ.ಜಿ–** ಪ್ರಾಂಶುಪಾಲರು ಮತ್ತು ಮತ್ತು ಮಾನ್ಯ ವಿದ್ಯಾವಿಷಯಕ ಪರಿಷತ್ತು ಸದಸ್ಯರು, ಇವರು ಸದರಿ ಕೋರ್ಸ್ ಪ್ರಾರಂಭಿಸಲು ನಮ್ಮ ಅಭ್ಯಂತರವಿರುವುದಿಲ್ಲ, ಯಾವುದೇ ರೀತಿಯ ಲೋಪದೋಷಗಳು ಆಗದಂತೆ ಪರಿಣಾಮಕಾರಿಯಾಗಿ ಕ್ರಮವಹಿಸುವುದು ಮತ್ತು ಸ್ಪಷ್ಟವಾಗಿ ಮಾಹಿತಿ ನೀಡಿ ಪ್ರಾರಂಭಿಸಿದ್ದಲ್ಲಿ ಅನುಕೂಲವಾಗುವುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

### :: ನಿರ್ಣಯ ::

2026–27ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ/ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ ವಿವಿಧ ಅಧ್ಯಯನ ಮಂಡಳಿ ಅಧ್ಯಕ್ಷರು ಸಲ್ಲಿಸಿರುವ **Short-Term Skill Development** ಕೋರ್ಸ್‌ಗಳ ಬಗ್ಗೆ ಸಿದ್ಧಪಡಿಸಲಾದ ಪಠ್ಯಕ್ರಮಗಳ ಅನುಮೋದನೆಯೊಂದಿಗೆ ನಿಯಮಾನುಸಾರ ಪರಿಚಯಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು                ಕುಲಪತಿಗಳು

| ಪರೀಕ್ಷಾಂಗ ವಿಭಾಗ – 5 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(e)–(08/26) |

# –: ಟಿಪ್ಪಣಿ :–

ವಿಷಯ : ಅನಿಯಮಿತ ಮೌಲ್ಯಮಾಪನದಿಂದ (Erratic Valuation) ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಪಾವತಿಸಿರುವ ಮರು ಮೌಲ್ಯಮಾಪನ ಶುಲ್ಕಗಳನ್ನು ಹಿಂತಿರುಗಿಸುವ ಬಗ್ಗೆ.

ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:12.08.2026.

******

ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಕೇಂದ್ರೀಯ ಮೌಲ್ಯಮಾಪನ ಕಾರ್ಯ ನಡೆಸಿ, ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳನ್ನು ಪರೀಕ್ಷಾ ತಂತ್ರಾಂಶದಲ್ಲಿ ಪ್ರಕಟಿಸಲಾಗುತ್ತಿದೆ. ತದನಂತರ, ವಿಧ್ಯಾರ್ಥಿಗಳ ಕುಂದು–ಕೊರತೆ ಪರಿಹಾರಕ್ಕಾಗಿ ವಿದ್ಯಾರ್ಥಿಗಳು ನಿಯಮಾನುಸಾರ ಉತ್ತರ ಪತ್ರಿಕೆಗಳ ಅಂಕಗಳ ಮರು ಸಂಕಲನ /ಜೆರಾಕ್ಸ್ ಪ್ರತಿ ಪಡೆಯಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸುವ ಅವಕಾಶ ಪರೀಕ್ಷಾ ವ್ಯವಸ್ಥೆಯಲ್ಲಿದೆ.

ಆದರೆ, ಉತ್ತರ ಪತ್ರಿಕೆಗಳ ಅನಿಯಮಿತ ಮೌಲ್ಯಮಾಪನ (Erratic Valuation), ಅಂಕಗಳ ಮರು ಸಂಕಲನದಿಂದ ಫಲಿತಾಂಶದಲ್ಲಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳಿಗಿಂತ ಶೇಕಡ 15ರಷ್ಟು ಹಾಗೂ ಹೆಚ್ಚು ಅಂಕಗಳ ವ್ಯತ್ಯಾಸಗಳಿದ್ದಲ್ಲಿ, ಕೆಲ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಪಾವತಿ ಮಾಡಿದ ಶುಲ್ಕಗಳನ್ನು ಹಿಂದಿರುಗಿಸಲು ಮನವಿ ಸಲ್ಲಿಸುತ್ತಿದ್ದಾರೆ. ವಿಶ್ವವಿದ್ಯಾನಿಲಯದ Ordinance ಪ್ರಕಾರ Erratic Valuation ಮಾಡುವ ಅಧ್ಯಾಪಕರುಗಳಿಗೆ ರೂ.5,000/-ಗಳ ದಂಡ ವಿಧಿಸಲು ಅವಕಾಶವಿರುತ್ತದೆ.

ಅದ್ಯಾಪಕರುಗಳಿಂದ ಸಂಗ್ರಹಿಸುವ ದಂಡ ಶುಲ್ಕದಲ್ಲಿ ವಿದ್ಯಾರ್ಥಿಗಳ ಮರು ಮೌಲ್ಯಮಾಪನ ಅಂಕಗಳ ಮರುಸಂಕಲನಗಳ ಶುಲ್ಕಗಳನ್ನು ಹಿಂದಿರುಗಿಸುವ ಬಗ್ಗೆ ಈ ವಿಷಯವನ್ನು ದಿನಾಂಕ:28.08.2026ರಂದು ಜರುಗುವ ವಿದ್ಯಾವಿಷಯಕ ಪರಿಷತ್ತು ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ ವಿವಿಧ ಸ್ನಾತಕ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಕೇಂದ್ರೀಯ ಮೌಲ್ಯಮಾಪನ ಕಾರ್ಯ ನಡೆಸಿ, ಪರೀಕ್ಷಾ ಫಲಿತಾಂಶಗಳನ್ನು ಪ್ರಕಟಿಸಿದ ನಂತರದಲ್ಲಿ ವಿದ್ಯಾರ್ಥಿಗಳು ನಿಯಮಾನುಸಾರ ಉತ್ತರ ಪತ್ರಿಕೆಗಳ ಅಂಕಗಳ ಮರು ಸಂಕಲನ / ಜೆರಾಕ್ಸ್ ಪ್ರತಿ ಪಡೆಯಲು ಆನ್‌ಲೈನ್ ಮೂಲಕ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿದಾಗ – ಉತ್ತರ ಪತ್ರಿಕೆಗಳ ಅನಿಯಮಿತ ಮೌಲ್ಯಮಾಪನ (Erratic Valuation) ಅಂಕಗಳ ಮರು ಸಂಕಲನದಿಂದ ಫಲಿತಾಂಶದಲ್ಲಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳಿಗಿಂತ ಶೇಕಡ 15 ರಷ್ಟು ಹಾಗೂ ಹೆಚ್ಚು ಅಂಕಗಳ ವ್ಯತ್ಯಾಸವಾದಾಗ, ವಿಶ್ವವಿದ್ಯಾನಿಲಯದ Ordinance ಪ್ರಕಾರ Erratic Valuation ಮಾಡುವ ಅಧ್ಯಾಪಕರುಗಳಿಗೆ ರೂ.5,000/-ಗಳ ದಂಡ ವಿಧಿಸಿ, ಸಂಗ್ರಹಿಸುವ ದಂಡ ಶುಲ್ಕದಲ್ಲಿ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕಗಳನ್ನು ನಿಯಮಾನುಸಾರ ಹಿಂದಿರುಗಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ – 6 | |
|---|---|
| ವಿಷಯ ಸಂಖ್ಯೆ: | ವಿ.ವಿ.ಪ.01(e)–(08/26) |

## :ಟಿಪ್ಪಣಿ:

**ವಿಷಯ : ಪ್ರಸ್ತುತ ಪರೀಕ್ಷಾ ಪದ್ದತಿಯಲ್ಲಿ ಅಗತ್ಯ ಬದಲಾವಣೆ ಮಾಡಿ, ಅನುತೀರ್ಣ ಪದವಿ ವಿದ್ಯಾರ್ಥಿಗಳಿಗೆ ಎಲ್ಲಾ ಸೆಮಿಸ್ಟರ್‌ನ ಬಾಕಿ ವಿಷಯಗಳ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶ ನೀಡುವ ಕುರಿತು.**

ಉಲ್ಲೇಖ :
1. ವಿ.ವಿ. ಅಧಿಸೂಚನೆ ಪತ್ರ ಸಂಖ್ಯೆ:ದಾವಿ/ಪವಿ/ಲೆಪ–1/2024–25/2559 ದಿನಾಂಕ:15.11.2024.
2. ಅಧ್ಯಕ್ಷರು, ದಾವಣಗೆರೆ ವಿಶ್ವವಿದ್ಯಾನಿಲಯ, ವಾಣಿಜ್ಯ ಮತ್ತು ನಿರ್ವಾಹಣಾಶಾಸ್ತ್ರ ಅಧ್ಯಾಪಕರ ಸಂಘ, ದಾವಣಗೆರೆ – ಇವರ ಮನವಿ ಪತ್ರ.

****

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸ್ನಾತಕ/ಸ್ನಾತಕೋತ್ತರ ಮಟ್ಟದ ಪದವಿ ಪರೀಕ್ಷೆಗಳಲ್ಲಿ ಸಮ ಮತ್ತು ಬೆಸ ಸೆಮಿಸ್ಟರ್ ಪರೀಕ್ಷೆಗಳನ್ನು 2024–25ನೇ ಶೈಕ್ಷಣಿಕ ಸಾಲಿನಿಂದ ಪ್ರತ್ಯೇಕವಾಗಿ ಏರ್ಪಡಿಲು ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ ಸಮ ಮತ್ತು ಬೆಸ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ಪ್ರಸ್ತುತ ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕಲಾ, ವಾಣಿಜ್ಯ, ವಿಜ್ಞಾನ ಮತ್ತು ನಿರ್ವಾಹಣಾಶಾಸ್ತ್ರ ಪದವಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅನೇಕ ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಅನುತ್ತೀರ್ಣಗೊಂಡು ಕೆಲ ವಿಷಯಗಳನ್ನು ಬಾಕಿ ಉಳಿಸಿಕೊಂಡಿರುತ್ತಾರೆ ಇದರಿಂದಾಗಿ ವಿದ್ಯಾರ್ಥಿಗಳಿಗೆ ಪದವಿ ಮುಗಿಸಿಕೊಳ್ಳಲು ತೊಂದರೆಯಾಗುತ್ತಿದೆ. ಆದುದರಿಂದ, ಪ್ರಸ್ತುತ ಇರುವ ಪರೀಕ್ಷಾ ಪದ್ದತಿಯಲ್ಲಿ ಅಗತ್ಯ ಬದಲಾವಣೆ ಮಾಡಿ, ವಿದ್ಯಾರ್ಥಿಗಳು ತಮ್ಮ ನಿಯಮಿತ ಸೆಮಿಸ್ಟರ್ ಪರೀಕ್ಷೆಯ ಜೊತೆಗೆ ಹಿಂದಿನ ಸೆಮಿಸ್ಟರ್‌ಗಳಲ್ಲಿ ಬಾಕಿ ಉಳಿಸಿಕೊಂಡಿರುವ ಎಲ್ಲಾ ವಿಷಯಗಳ ಪರೀಕ್ಷೆಗಳಿಗೆ ಪ್ರತಿ ಸೆಮಿಸ್ಟರ್‌ನ ಪರೀಕ್ಷೆ ಸಮಯದಲ್ಲಿ ಹಾಜರಾಗಲು ಅವಕಾಶ ಕಲ್ಪಿಸುವ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಉಲ್ಲೇಖ (2) ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಮನವಿ ಪತ್ರ ಸ್ವೀಕೃತಗೊಂಡಿರುತ್ತವೆ. ಈ ವಿಷಯವನ್ನು ದಿನಾಂಕ:28.08.2026 ರಂದು ಏರ್ಪಡಿಸಲಾಗಿರುವ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ಸದರಿ ವಿಷಯ ಕುರಿತಂತೆ ಸಮಿತಿಯನ್ನು ರಚಿಸಿ, ಸಮಿತಿಯ ನಿರ್ಣಯದನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು ಸಭೆಯು ಸಮಿತಿ ರಚಿಸಲು ಒಮ್ಮತದಿಂದ ಅನುಮೋದಿಸಿತು.

ಕೊನೆಯಲ್ಲಿ ಕುಲಸಚಿವರು(ಆ) ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು                                        ಕುಲಪತಿಗಳು